ಓ ಎಸ್ ನಂ. 89/2018

ಡಿ .ಡಬ್ಲ್ಯೂ :2

ದಿನಾಂಕ :14-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ ಪಿ ಎಂ ಎಸ್ ವಕೀಲರಿಂದಃ</u>

ನನಗೆ ವಾದಿ ಮತ್ತು ಪ್ರತಿವಾದಿಗಳು ಗೊತ್ತು . ಸುಮಾರು 15 ವರ್ಷಗಳಿಂದಲೂ ಅವರುಗಳು ಗೊತ್ತು . ದಾವಾ ಸ್ವತ್ತನ್ನು 8 ನೇ ಪ್ರತಿವಾದಿಯು ಖರೀದಿಸಿದ ನಂತರ 2018 ನೇ ಸಾಲಿನಲ್ಲಿ ಅವರು ದಾವಾ ಸ್ವತ್ತನ್ನು ಅವರು ನನಗೆ ತೋರಿಸಿದ್ದರು . ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ -ಪಶ್ಚಿಮ ಃ 107 ಅಡಿಗಳು ಉತ್ತರ -ದಕ್ಷಿಣ ಃ 33 ಅಡಿಗಳು . ಸದರಿ ಸ್ವತ್ತಿನ ಚಕ್ಕುಬಂದಿ ತಿಳಿದಿಲ್ಲ . ದಾವಾ ಸ್ವತ್ತನ್ನು ಯಾರು ಯಾರು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಜಯಲಕ್ಷ್ಮಮ್ಮ ರವರು ಬರೆದುಕೊಟ್ಟಿದ್ದಾರೆ ಎಂದು 8 ನೇ ಪ್ರತಿವಾದಿಯು ತಿಳಿಸಿದ್ದರು , ಅಷ್ಟು ಮಾತ್ರ ನನಗೆ ತಿಳಿದಿದೆ . ಕರಾರು ಪತ್ರ ಮಾಡುವಾಗ ನೀವು ಎಲ್ಲಿದ್ದಿರಿ ಎಂದರೆ ಸಾಕ್ಷಿಯು ಕರಾರು ಪತ್ರ ಮಾಡುವಾಗ ನಾನು ಹೋಗಿರಲಿಲ್ಲ , ನನಗೆ ಅದರ ಬಗ್ಗೆ ಮಾಹಿತಿ ಇಲ್ಲ , 8 ನೇ ಪ್ರತಿವಾದಿಯು ಅದರ ಬಗ್ಗೆ ತಿಳಿಸಿದ್ದರು ಎಂದು ತಿಳಿಸಿದ್ದಾರೆ . ಕರಾರು ಪತ್ರದ ಬಗ್ಗೆ ನಿಮಗೆ ಏನು ಮಾಹಿತಿ ಇದೆ ಎಂದರೆ ಸಾಕ್ಷಿಯು 8 ನೇ ಪ್ರತಿವಾದಿಯು ರೂ.2,85,000/- ಗಳಿಗೆ ಖರೀದಿ ಮಾತುಕತೆ ನಡೆದಿದೆ , ಅದರಲ್ಲಿ ರೂ.1,85,000/- ಗಳನ್ನು ನೀಡಿದ್ದೇನೆ , ಉಳಿದ ರೂ.1,00,000/- ಗಳನ್ನು ನೀಡಿದ ನಂತರ ಕರಾರು ಪತ್ರ ನೋಂದಾಯಿಸಿಕೊಳ್ಳುತ್ತೇನೆ ಎಂದು ನನಗೆ ಹೇಳಿದ್ದರು ಎಂದು ಉತ್ತರಿಸಿದ್ದಾರೆ . ಕರಾರು ಪತ್ರ ನಡೆದಿರುವ ವಿಚಾರ ನಿಮಗೆ ತಿಳಿದಿದೆ ಆ ಬಗ್ಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿ ಎಂದು 8 ನೇ ಪ್ರತಿವಾದಿಯು ಹೇಳಿದ ಕಾರಣ ನೀವು ಸಾಕ್ಷಿ ನುಡಿಯಲು ಬಂದಿದ್ದೀರಿ ಎಂದರೆ ಸಾಕ್ಷಿಯು ಕರಾರು ಪತ್ರದ ವಿಚಾರ ನನಗೆ ತಿಳಿದಿತ್ತು ಆದುದರಿಂದ ಬಂದಿದ್ದೇನೆ ಎಂದು ತಿಳಿಸಿದ್ದಾರೆ . ಕರಾರು ಪತ್ರದಲ್ಲಿ

ನನ್ನ ಹೆಸರು, ವಿಳಾಸ ಮತ್ತು ಸಹಿ ಇರುವುದಿಲ್ಲ , ಆದುದರಿಂದ ನಾನು ಕರಾರು ಪತ್ರದ ಬಗ್ಗೆ ಸಾಕ್ಷಿ ನುಡಿಯಲು ಸೂಕ್ತವಾದ ಸಾಕ್ಷಿಯಲ್ಲ ಎಂದರೆ ಸಾಕ್ಷಿಯು ನನಗೆ ಕರಾರು ಪತ್ರದ ಬಗ್ಗೆ 8 ನೇ ಪ್ರತಿವಾದಿಯು ವಿವರಗಳನ್ನು ತಿಳಿಸಿದ್ದಾರೆ, ಆದುದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎಂದು ತಿಳಿಸಿದ್ದಾರೆ . 8 ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ವಿವರಗಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಜಯಮ್ಮ ರವರು ಪ್ರಸ್ತುತ ಜೀವಂತವಾಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .